Wide range of weighing scales for Domestic, Clinic and every trade.
ACCURATE
STURDY
RELIABLE
Silco
SALES & SERVICE BY:
B. Ganapathi Bhandarkar & Sons
H.O.:176, Golikatta Bazaar, Bunder, Mangalore.
Ph: 0824-2423521, 2425275
Branch:598, Avenue Road, Bangalore. Ph: 080- 22251925

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ

Sahyadri College of Engineering & Management
CENTRAL LIBRARY

Hindustan S
NIFS Mangalo
Approved by Ar
University UGC
• DIPLOMA IN F
• B.Sc. / MBA SA
• NEBOSH / IOSH
VALENCIA, MANGALOR
M: + 91 876212
Web: www.hi

Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಬುಧವಾರ, ಮೇ 17, 2017 ಬೆಲೆ: ₹ 4-00 ವಿದೇಶ ಬೆಲೆ: ₹ 5-00 ಪುಟಗಳು: 14+4 (UDP 8, KL

# ಮೇ 18: ಭಾರತ ಸರಕಾರದ ಯೋಜನೆಗಳ ಫಲಾನುಭವಿಗಳ, ಫಲಾಪೇಕ್ಷಿಗಳ ಕಾರ್ಯಾಗಾರ

ಮಂಗಳೂರು, ಮೇ 16: ಭಾರತ ಸರಕಾರದ ವಿನೂತನ ಯೋಜನೆಗಳಾದ ಪ್ರಧಾನಮಂತ್ರಿ ಮುದ್ರಾ ಯೋಜನೆ ಹಾಗೂ ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಕುರಿತು ಮಾಹಿತಿ ಶಿಬಿರ ಹಾಗೂ ಕೇಂದ್ರ ಸರಕಾರದ ವಿವಿಧ ಯೋಜನೆಗಳಡಿ ಸವಲತ್ತು ಪಡೆದಿರುವ ಫಲಾನುಭವಿಗಳ ಹಾಗೂ ಹೊಸ ಫಲಾಪೇಕ್ಷಿಗಳ ದ.ಕ. ಜಿಲ್ಲಾಮಟ್ಟದ ಕಾರ್ಯಾಗಾರ ಮೇ 18ರಂದು ಅಡ್ಯಾರ್‌ನ ಸಹ್ಯಾದ್ರಿ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಸದ ನಳಿನ್ ಕುಮಾರ್ ಕಟೀಲು, ಕಾರ್ಯಾಗಾರವನ್ನು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಉದ್ಘಾಟಿಸಲಿದ್ದು, ಕೇಂದ್ರ ಕಾರ್ಪೊರೇಟ್ ವ್ಯವಹಾರದ ವಿತ್ತ ಸಚಿವ ಅರ್ಜುನ್ ರಾಮ್ ಮೇಘಾವಾಲ್ ಫಲಾನುಭವಿಗಳಿಗೆ ಯೋಜನೆ ಸವಲತ್ತು ಹಸ್ತಾಂತರಿಸಲಿರುವರು. ಕ್ಯಾ। ಗಣೇಶ್ ಕಾರ್ಣಿಕ್, ಜಿ.ಪಂ. ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು, ಶಾಸಕ ಅಂಗಾರ ಹಾಗೂ ಪ್ರಮುಖ ಬ್ಯಾಂಕ್‌ಗಳ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರು ಭಾಗವಹಿಸಲಿರುವರು ಎಂದರು.

ಈ ಕಾರ್ಯಾಗಾರದಲ್ಲಿ ಕೇಂದ್ರ ಸರಕಾರದ ಯೋಜನೆಗಳ ಬಗ್ಗೆ ಪೂರ್ಣ ಮಾಹಿತಿ ನೀಡಲಾಗುವುದು. ಕಾರ್ಯಾಗಾರದಲ್ಲಿ ಸುಮಾರು 2,000 ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಅವರು ವಿವರಿಸಿದರು.

## ಪ್ರಧಾನಮಂತ್ರಿ ಮುದ್ರಾ ಯೋಜನೆ

08-4-2015ರಿಂದ 31-3-2017 ರವರೆಗೆ (2015-16 ಮತ್ತು 2016-17) ಒಟ್ಟು 50,706 ಫಲಾನುಭವಿಗಳು ದ.ಕ. ಜಿಲ್ಲೆಯಲ್ಲಿ ಸಾಲ ಪಡೆದುಕೊಂಡಿದ್ದು 702.71 ಕೋಟಿ ರೂ. ಸಾಲ ಬಿಡುಗಡೆಯಾಗಿದೆ.

## ಮುದ್ರಾ ಯೋಜನೆಗಳು

ಮುದ್ರಾ ಶಿಶು: 28,365 ( 93.73 ಕೋಟಿ ರೂ.), ಮುದ್ರಾ ಕಿಶೋರ್: 19,370 (402.97 ಕೋಟಿ ರೂ.), ಮುದ್ರಾ ತರುಣ್: 2,971 (206.01 ಕೋ. ರೂ.) ಜನರಿಗೆ ನೀಡಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಲೀಡ್ ಬ್ಯಾಂಕ್ ಮೆನೇಜರ್ ರಾಘವ ಯಜಮಾನ್ಯ, ಕೆಯುಐಸಿ ಮೆನೇಜರ್ ವೀರಪ್ಪ ಪೂಜಾರಿ, ಕೌಶಲ ಅಭಿವೃದ್ಧಿ ಮುಖ್ಯಸ್ಥ ಲೋಕೇಶ್ ಉಪಸ್ಥಿತರಿದ್ದರು.

ಬುಧವಾರ,17 ಮೇ 2017 | ಪುಟಗಳು: 18+4+4(Udp6, Ptr6) | ಬೆಲೆ: ₹ 5.00
www.vijaykarnataka.com
ಸಂಪುಟ: 16 | ಸಂಚಿಕೆ: 291
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ
PRI




ಬ್ಯಾಡ್ಮಿಂಟನ್ ತಾರೆ ಪಿ ವಿ ಸಿಂಧು ಆಂಧ್ರದಲ್ಲಿ ಉಪವಿಭಾಗಾಧಿಕಾರಿಯಾಗಿ ನೇಮಕ P15

ಜೆಎನ್‌ಯು ವಿದ್ಯಾರ್ಥಿ ನಜೀಬ್ ಅಹಮದ್ ನಾಪತ್ತೆ ಪ್ರಕರಣದ ತನಿಖೆಯನ್ನು ದಿಲ್ಲಿ ಹೈಕೋರ್ಟ್ ಸಿಬಿಐಗೆ ವರ್ಗಾಯಿಸಿದೆ. P12

ಸೂಪರ್ ಸ್ಟಾರ್ ರಜನಿಕಾಂತ್ ಮುಂದಿನ ಚಿತ್ರದಲ್ಲಿ ಹುಮಾ ಖುರೇಶಿ ನಾಯಕಿ

## ಸಹ್ಯಾದ್ರಿಯಲ್ಲಿ 18ರಂದು ಮುದ್ರಾ, ಸ್ಟಾರ್ಟ್ ಅಪ್ ಮಾಹಿತಿ

# ಶಿಬಿರ, ಫಲಾನುಭವಿಗಳಿಗೆ ಕಾರ್ಯಾಗಾರ



### ಮುದ್ರಾ: ಜಿಲ್ಲೆಯಲ್ಲಿ 702.71 ಕೋಟಿ ರೂ. ಸಾಲ ವಿತರಣೆ

**ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ದ.ಕ. ಜಿಲ್ಲೆಯ 50,706 ಮಂದಿ ಫಲಾನುಭವಿಗಳಿಗೆ 702.71 ಕೋಟಿ ರೂ. ಸಾಲ ಬಿಡುಗಡೆ ಮಾಡಲಾಗಿದೆ. ಮುದ್ರಾ ಶಿಶು ಯೋಜನೆಯಡಿ 28365 ಮಂದಿ ಫಲಾನುಭವಿಗಳಿಗೆ 93.73 ಕೋಟಿ ರೂ., ಮುದ್ರಾ ಕಿಶೋರ್ ಯೋಜನೆಯಡಿ 19370 ಫಲಾನುಭವಿಗಳಿಗೆ 402.97 ಕೋಟಿ ರೂ., ಮುದ್ರಾ ತರುಣ್ ಯೋಜನೆಯಡಿ 2971 ಫಲಾನುಭವಿಗಳಿಗೆ 206.01 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಸಂಸದ ನಳಿನ್ ಹೇಳಿದರು.**

**ಜನಧನ್: ಪ್ರಧಾನ ಮಂತ್ರಿಯವರ ಜನ್‌ಧನ್ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 3,68,562 ಖಾತೆಗಳನ್ನು ತೆರೆಯಲಾಗಿದೆ. ಇದರಲ್ಲಿ 2,77,401 ಮಂದಿಗೆ ರುಪೇ ಕಾರ್ಡ್ ವಿತರಿಸಲಾಗಿದೆ. ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ ಒಟ್ಟು 80 ಪ್ರಸ್ತಾವನೆಗಳಿಗೆ ಮಂಜೂರಾತಿ ದೊರೆತಿದ್ದು, 15.54 ಕೋಟಿ ರೂ. ಸಾಲ ಬಿಡುಗಡೆ ಮಾಡಲಾಗಿದೆ ಎಂದರು.**

**ಮಂಗಳೂರು:** ಕೇಂದ್ರ ಸರಕಾರದ ವಿನೂತನ ಯೋಜನೆಗಳಾದ ಪ್ರಧಾನ ಮಂತ್ರಿ ಮುದ್ರಾ ಯೋಜನೆ ಹಾಗೂ ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಕುರಿತು ದ.ಕ. ಜಿಲ್ಲಾಮಟ್ಟದ ಮಾಹಿತಿ ಶಿಬಿರ, ಫಲಾನುಭವಿಗಳ ಕಾರ್ಯಾಗಾರ ಮಂಗಳೂರಿನ ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಮೇ 18ರಂದು ನಡೆಯಲಿದೆ ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಹೇಳಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಾಗಾರವನ್ನು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಉದ್ಘಾಟಿಸುವರು. ಕೇಂದ್ರ ವಿತ್ತ ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವ ಅರ್ಜುನ್ ರಾಮ್ ಮೇಘಾವಾಲ್ ಯೋಜನೆಯ ಸವಲತ್ತುಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸುವರು. ಸಂಸದ ನಳಿನ್ ಕುಮಾರ್ ಕಟೀಲ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಜಿಪಂ ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು, ಶಾಸಕ ಅಂಗಾರ ಹಾಗೂ ಪ್ರಮುಖ ಬ್ಯಾಂಕ್‌ಗಳ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರುಗಳು ಭಾಗವಹಿಸಲಿರುವರು ಎಂದರು.

ಕಾರ್ಯಾಗಾರದಲ್ಲಿ ಕೇಂದ್ರ ಸರಕಾರದ ಯೋಜನೆಗಳ ಬಗ್ಗೆ ಪೂರ್ಣ ಮಾಹಿತಿ ನೀಡಲಾಗುವುದು. ಕಾರ್ಯಾಗಾರದಲ್ಲಿ ಸುಮಾರು 2000 ಮಂದಿ ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಂಸದರು ನುಡಿದರು.

ಸಾಮಾಜಿಕ ಭದ್ರತಾ ಯೋಜನೆಗಳಾದ ಪ್ರಧಾನ ಮಂತ್ರಿಗಳ ಜೀವನ ಜ್ಯೋತಿ ಭೀಮಾ ಯೋಜನೆಯಡಿ 1,23,506 ಖಾತೆಗಳಲ್ಲಿ 218 ಕ್ಲೇಮ್‌ಗಳಿಗೆ 4.36 ಕೋಟಿ ರೂ. ನೀಡಲಾಗಿದೆ.

ಪ್ರಧಾನ ಮಂತ್ರಿಗಳ ಸುರಕ್ಷಾ ಭೀಮಾ ಯೋಜನೆಯಡಿ ಒಟ್ಟು 3,46,220 ಖಾತೆಗಳಲ್ಲಿ 111 ಕ್ಲೇಮ್‌ಗಳಿಗೆ 2.20 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಅಟಲ್ ಪಿಂಚಣಿ ಯೋಜನೆಯಡಿ ಒಟ್ಟು 11,496 ಖಾತೆಗಳನ್ನು ತೆರೆಯಲಾಗಿದೆ. ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ ಯೋಜನೆಯಡಿ 2013-14ನೇ ಸಾಲಿನಲ್ಲಿ 225 ಮಂದಿ ಫಲಾನುಭವಿಗಳಿಗೆ 7.95 ಕೋಟಿ ರೂ., 2014-15ನೇ ಸಾಲಿನಲ್ಲಿ 216 ಫಲಾನುಭವಿಗಳಿಗೆ 8.39 ಕೋಟಿ ರೂ. ಹಾಗೂ 2015-16ನೇ ಸಾಲಿನಲ್ಲಿ 228 ಮಂದಿ ಫಲಾನುಭವಿಗಳಿಗೆ 8.95 ಲಕ್ಷ ರೂ. ಮಾರ್ಜಿನ್ ಮನಿ ನೀಡಲಾಗಿದೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಲೀಡ್ ಬ್ಯಾಂಕ್ ಮೆನೇಜರ್ ರಾಘವ ಬಿ. ಯಜಮಾನ್ಯ ಉಪಸ್ಥಿತರಿದ್ದರು.

ಬುಧವಾರ, ಮೇ 17, 2017 | ಮಂಗಳೂರು | ₹ 5.00 | ಪುಟ 22 + 2 | ಸಂಪುಟ 20 | ಸಂಚಿಕೆ 136 • www.prajavani.net f/prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Sahyadri College of Engineering & Management
CENTRAL LIBRARY
Adyar, Mangalore-7

ವಾಣಿಜ್ಯ
ಟೀಮ್ ಇಂಡಸ್ ಚಂದ್ರನಿಗೆ ಲಗ್ಗೆ ಯತ್ನ

## ಮುದ್ರಾ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಗತಿ

# ₹702.71 ಕೋಟಿ ಸಾಲ ವಿತರಣೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಸ್ವಯಂ ಉದ್ಯೋಗ ಕೈಗೊಳ್ಳುವವರಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಜಾರಿಗೆ ತಂದ ಪ್ರಧಾನ ಮಂತ್ರಿ ಮುದ್ರಾ ಬ್ಯಾಂಕ್ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೆ 50,706 ಫಲಾನುಭವಿಗಳಿಗೆ ₹ 702.71 ಕೋಟಿ ಸಾಲ ವಿತರಣೆ ಮಾಡಲಾಗಿದೆ ಎಂದು ಸಂಸದ ನಳಿನ್ ಕುಮಾರ್ ಕಟೀಲ್ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '2015ರ ಏಪ್ರಿಲ್ 1ರಂದು ಮುದ್ರಾ ಬ್ಯಾಂಕ್ ಯೋಜನೆ ಜಾರಿಗೆ ಬಂದಿತು. ಮುದ್ರಾ ಶಿಶು ವಿಭಾಗದಲ್ಲಿ 28,365 ಜನರಿಗೆ ₹ 93.73 ಕೋಟಿ ಸಾಲ ನೀಡಲಾಗಿದೆ. ಮುದ್ರಾ ಕಿಶೋರ್ ವಿಭಾಗದಲ್ಲಿ 19,370 ಫಲಾನುಭವಿಗಳಿಗೆ ₹ 402.97 ಕೋಟಿ ಸಾಲ ವಿತರಿಸಲಾಗಿದೆ. ಮುದ್ರಾ ತರುಣ್ ವಿಭಾಗದಲ್ಲಿ 2,971 ಫಲಾನುಭವಿಗಳಿಗೆ ₹ 206.01 ಕೋಟಿ ಸಾಲ ವಿತರಣೆ ಮಾಡಲಾಗಿದೆ' ಎಂದು ವಿವರ ನೀಡಿದರು.

ಮುದ್ರಾ ಬ್ಯಾಂಕ್ ಯೋಜನೆಯು ಜಿಲ್ಲೆಯಲ್ಲಿ ನಿರುದ್ಯೋಗ ನಿವಾರಣೆ ಮತ್ತು ಹೊಸ ಉದ್ದಿಮೆಗಳ ಸ್ಥಾಪನೆಯಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತಿದೆ. ದೇಶದಲ್ಲಿ ಅತಿಹೆಚ್ಚಿನ ಫಲಾನುಭವಿಗಳಿಗೆ ಸಾಲ ವಿತರಿಸಿದ ಜಿಲ್ಲೆಗಳ ಪಟ್ಟಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಇದೆ. ಉದ್ಯೋಗ ಸೃಷ್ಟಿ, ಸ್ವಾಭಿಮಾನದ ಬದುಕು ಮತ್ತು ಅಂತ್ಯೋದಯದ ಗುರಿ ಸಾಧನೆಗಾಗಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೊಳಿಸಿದೆ ಎಂದರು.

## ಮಾಹಿತಿಗಾಗಿ ಕಾರ್ಯಾಗಾರ



ನಳಿನ್‌ಕುಮಾರ್ ಕಟೀಲ್

'ಮುದ್ರಾ, ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯ ಫಲಾನುಭವಿಗಳಿಗಾಗಿ ಅಡ್ಯಾರ್‌ನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಗುರುವಾರ ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್ ಬೆಳಿಗ್ಗೆ 11 ಗಂಟೆಗೆ ಕಾರ್ಯಾಗಾರ ಉದ್ಘಾಟಿಸುವರು. ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಖಾತೆ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘಾವಾಲ್ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಿಸುವರು' ಎಂದು ನಳಿನ್‌ಕುಮಾರ್ ಕಟೀಲ್ ಮಾಹಿತಿ ನೀಡಿದರು.

ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಗಳ ಅಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 80 ಪ್ರಸ್ತಾವಗಳಿಗೆ ಮಂಜೂರಾತಿ ನೀಡಿದ್ದು, ₹ 15.54 ಕೋಟಿ ಸಾಲ ವಿತರಣೆ ಮಾಡಲಾಗಿದೆ. ಈ ಯೋಜನೆಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರು ಉದ್ದಿಮೆಗಳ ಸ್ಥಾಪಿಸಲು ನೆರವು ನೀಡಲಿವೆ. ಈ ವರ್ಗದ ಫಲಾನುಭವಿಗಳಿಗೆ ₹ 10 ಲಕ್ಷದಿಂದ ₹ 1 ಕೋಟಿ ವರೆಗೆ ಸಾಲ ನೀಡಲಾಗುತ್ತದೆ ಎಂದು ತಿಳಿಸಿದರು.

ಪ್ರಧಾನಮಂತ್ರಿ ಜನಧನ ಯೋಜನೆಯಡಿ ಜಿಲ್ಲೆಯಲ್ಲಿ 3,68,562 ಖಾತೆಗಳನ್ನು ತೆರೆಯಲಾಗಿದೆ. ಅವುಗಳಲ್ಲಿ 2,77,401 ಖಾತೆದಾರರಿಗೆ ರೂಪೇ ಕಾರ್ಡ್ ವಿತರಿಸಲಾಗಿದೆ. 2,25,980 ಖಾತೆಗಳು ಈಗ ಸಕ್ರಿಯವಾಗಿ ಉಳಿದಿವೆ ಎಂದರು.

ಪ್ರಧಾನಮಂತ್ರಿ ಜೀವನಜ್ಯೋತಿ ವಿಮಾ ಯೋಜನೆಯಡಿ ಜಿಲ್ಲೆಯಲ್ಲಿ 1,23,506 ಖಾತೆಗಳನ್ನು ತೆರೆಯಲಾಗಿದೆ. ಈವರೆಗೆ 218 ಕ್ಲೇಮು ಅರ್ಜಿಗಳು ಬಂದಿದ್ದು, ₹ 4.36 ಕೋಟಿ ವಿಮೆ ಪರಿಹಾರ ವಿತರಿಸಲಾಗಿದೆ. ಪ್ರಧಾನ ಮಂತ್ರಿ ಜೀವನ ಸುರಕ್ಷಾ ವಿಮಾ ಯೋಜನೆಯಡಿ 3,46,220 ಖಾತೆಗಳನ್ನು ತೆರೆಯಲಾಗಿದೆ. ಇದುವರೆಗೆ 111 ಕ್ಲೇಮು ಅರ್ಜಿಗಳಿಗೆ ₹ 2.20 ಕೋಟಿ ವಿಮೆ ಪರಿಹಾರ ಪಾವತಿ ಮಾಡಲಾಗಿದೆ. ಅಟಲ್‌ಪಿಂಚಣಿ ಯೋಜನೆಯಡಿ ಜಿಲ್ಲೆಯ 11,496 ಜನರು ಖಾತೆ ತೆರದಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರಧಾನಮಂತ್ರಿ ಉದ್ಯೋಗ ಸೃಷ್ಟಿ ಯೋಜನೆಯಡಿ 2013-14ರಲ್ಲಿ 225 ಫಲಾನುಭವಿಗಳಿಗೆ ₹ 7.95 ಕೋಟಿ ವಿತರಿಸಲಾಗಿದೆ. 2014- 15ರಲ್ಲಿ 216 ಜನರಿಗೆ ₹ 8.39 ಕೋಟಿ ವಿತರಣೆ ಮಾಡಲಾಗಿದೆ. 2015-16ರಲ್ಲಿ 228 ಫಲಾನುಭವಿಗಳಿಗೆ ₹ 8.95 ಕೋಟಿ ವಿತರಿಸಲಾಗಿದೆ ಎಂದರು.

~ಮುಂಜಾನೆ ಮಾತು~
ಯೋಗ್ಯ ವ್ಯಕ್ತಿಗಳ ಸಂಬಂಧಕ್ಕೆ ನಮ್ಮ ಪ್ರತಿಷ್ಠೆ ಬಲಿಯಾದರೂ ಚಿಂತಿಸಬೇಕಿಲ್ಲ. ಆದರೆ ಪ್ರತಿಷ್ಠೆಗಾಗಿ ಯೋಗ್ಯ ಸಂಬಂಧ ಹಾಳುಮಾಡಿಕೊಳ್ಳಬಾರದು.

ವಿಜಯವಾಣಿ
ಕನ್ನಡಿಗರ ಧ್ವನಿ
No. 1 ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 6 ● ಸಂಚಿಕೆ 47

CENTRAL LIBRARY



# ನಾಳೆ ಮುದ್ರಾ ಯೋಜನೆ ಶಿಬಿರ

**ಮಂಗಳೂರು:** ಪ್ರಧಾನ ಮಂತ್ರಿ ಮುದ್ರಾ ಯೋಜನೆ, ಸ್ಟಾರ್ಟ್ ಅಪ್ ಸ್ಟಾಂಡಪ್ ಯೋಜನೆ ಮಾಹಿತಿ ಶಿಬಿರ ಮತ್ತು ಫಲಾನುಭವಿಗಳ ಕಾರ್ಯಾಗಾರ ಸಹ್ಯಾದ್ರಿ ಕಾಲೇಜಿನಲ್ಲಿ ಮೇ 18ರಂದು ನಡೆಯಲಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಹಾಗೂ ಕೇಂದ್ರ ವಿತ್ತ ಹಾಗೂ ಕಾರ್ಪೊರೇಟ್ ವ್ಯವಹಾರಗಳ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘಾವಾಲ್ ಪಾಲ್ಗೊಳ್ಳಲಿದ್ದಾರೆ. ಕೇಂದ್ರ ಕೌಶಲಾಭಿವೃದ್ಧಿ ಸಚಿವ ರಾಜೀವ್ ಪ್ರತಾಪ್ ರೂಡಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

Exclusive Watch Showroom for all Brands
Specialized Service Center for all Brands
Oasis Mall, Hubli
381628

▪ ಮಂಗಳೂರು ▪ ಹುಬ್ಬಳ್ಳಿ ▪ ಕಲಬುರಗಿ ▪ ಬೆಂಗಳೂರು ▪ ದಾವಣಗೆರೆ

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು

▪ ಸಂಪುಟ 59 ▪ ಸಂಚಿಕೆ 111 ಬುಧವಾರ, 17, ಮೇ, 2017, ಪುಟ 12+8 ರೂ. 5-00

CENTRAL LIBRARY

Exclusive Watch Showroom for all Brands
TISSOT RADO
CASIO SONATA
TITAN
HORIZON
Koppikar Road & Urban Oasis Mall, Hubli
Cell- 09482381628

## ಮುದ್ರಾ ಯೋಜನೆ: ಫಲಾನುಭವಿಗಳ ಕಾರ್ಯಾಗಾರ



ಮಂಗಳೂರು: ಕೇಂದ್ರ ಸರ್ಕಾರದ ನೂತನ ಯೋಜನೆಗಳಾದ ಪ್ರಧಾನಮಂತ್ರಿ ಮುದ್ರಾ ಯೋಜನೆ ಹಾಗೂ ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಕುರಿತ ಮಾಹಿತಿ ಶಿಬಿರ ಮತ್ತು ಫಲಾನುಭವಿಗಳ ಕಾರ್ಯಾಗಾರ ಮೇ 18ರಂದು ಅಡ್ಯಾರಿನ ಸಹ್ಯಾದ್ರಿ ಕಾಲೇಜಿನಲ್ಲಿ ನಡೆಯಲಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ದ.ಕ. ಸಂಸದ ನಳಿನ್ ಕುಮಾರ್ ಕಟೀಲು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಉದ್ಘಾಟಿಸಲಿದ್ದು, ಕೇಂದ್ರ ಸಹಾಯಕ ವಿತ್ತ ಸಚಿವ ಅರ್ಜುನ್ ರಾಮ್ ಮೇಘಾವಾಲ್ ಯೋಜನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಿದ್ದಾರೆ ಎಂದರು.

ಕಾರ್ಯಾಗಾರದಲ್ಲಿ ಸುಮಾರು 2,000 ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಅಲ್ಲದೆ ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ 2015 ಏಪ್ರಿಲ್‌ನಿಂದ 2017 ಮಾರ್ಚ್‌ವರೆಗೆ 50,706 ಮಂದಿ ಫಲಾನುಭವಿಗಳು 702.71 ಕೋಟಿ ಸಾಲ ಪಡೆದಿದ್ದಾರೆ. ಈ ಫಲಾನುಭವಿಗಳನ್ನೂ ಸಮಾವೇಶಕ್ಕೆ ಆಹ್ವಾನಿಸಲಾಗಿದೆ ಎಂದರು.

ಮುದ್ರಾ ಯೋಜನೆಯಲ್ಲಿ 50 ಸಾವಿರದಿಂದ 10 ಲಕ್ಷವರೆಗೆ ಜಾಮೀನು ರಹಿತವಾಗಿ ಬ್ಯಾಂಕ್‌ಗಳು ಫಲಾನುಭವಿಗಳಿಗೆ ಸಾಲವನ್ನು ನೀಡಬೇಕು. ಸಾಲ ಮರುಪಾವತಿಯಾಗದಿದ್ದರೆ ಬ್ಯಾಂಕ್‌ಗಳಿಗೆ ನಷ್ಟವಿಲ್ಲ. ಯಾಕೆಂದರೆ ಸಾಲದ ಮೊತ್ತವನ್ನು ಕೇಂದ್ರ ಸರ್ಕಾರ ಭರಿಸುತ್ತದೆ. ಬ್ಯಾಂಕ್‌ಗಳು ಯಾವುದೇ ನೆಪ ಹೇಳಿ ಸಾಲ ನಿರಾಕರಿಸುವಂತಿಲ್ಲ. ಈ ಯೋಜನೆಯಲ್ಲಿ ಸಾಲ ಪಡೆಯಲು ಸಬ್ಸಿಡಿ ಇರುವುದಿಲ್ಲ. ಆದರೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಇರುತ್ತದೆ ಎಂದರು.

ಪ್ರಧಾನ ಮಂತ್ರಿ ಜನಧನ್ ಯೋಜನೆಯಲ್ಲಿ ಒಟ್ಟು 3,68,562 ಖಾತೆಗಳನ್ನು ತೆರೆಯಲಾಗಿದೆ. ಇದರಲ್ಲಿ 2,77,401 ಮಂದಿಗೆ ರುಪೇ ಕಾರ್ಡ್ ನೀಡಲಾಗಿದೆ. 2,25,980 ಖಾತೆಗಳು ಸಕ್ರಿಯವಾಗಿದೆ. ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾದಲ್ಲಿ 80 ಪ್ರಸ್ತಾವನೆಗಳು ಮಂಜೂರಾಗಿದ್ದು, 15.54 ಕೋಟಿ ಸಾಲ ನೀಡಲಾಗಿದೆ. ಜೀವನ ಜ್ಯೋತಿ ಬಿಮಾ ಯೋಜನೆಯಲ್ಲಿ 1,23,506 ಖಾತೆಗಳನ್ನು ತೆರೆಯಲಾಗಿದ್ದು, 218 ಕ್ಲೇಮ್‌ಗಳಿಗೆ 436 ಲಕ್ಷ ನೀಡಲಾಗಿದೆ. ಸುರಕ್ಷಾ ಬಿಮಾ ಯೋಜನೆಯಲ್ಲಿ 3,46,220 ಖಾತೆಗಳಲ್ಲಿ 220 ಲಕ್ಷ ಮೊತ್ತವನ್ನು 111 ಕ್ಲೇಮ್‌ಗಳಿಗೆ ನೀಡಲಾಗಿದೆ. ಅಟಲ್ ಪಿಂಚಣಿಯಲ್ಲಿ 11,496 ಖಾತೆಗಳನ್ನು ತೆರೆಯಲಾಗಿದೆ. ಉದ್ಯೋಗ ಸೃಷ್ಟಿ ಯೋಜನೆಯಲ್ಲಿ 2015-16ನೇ ಸಾಲಿಗೆ 228 ಫಲಾನುಭವಿಗಳಿಗೆ 895.50 ಲಕ್ಷ ಸಾಲ ನೀಡಲಾಗಿದೆ ಎಂದರು. ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ರಾಘವ ಯಜಮಾನ್ಯ, ಕೌಶಲ್ಯಾಭಿವೃದ್ಧಿ ಯೋಜನೆ ಮೇಲ್ವಿಚಾರಕ ಲೋಕೇಶ್, ಜಿಲ್ಲಾ ಮೆನೇಜರ್ ವೀರಪ್ಪ ಪೂಜಾರಿ ಉಪಸ್ಥಿತರಿದ್ದರು.

ಬುಧವಾರ 17.5.2017
• ಬೆಂಗಳೂರು • ಬೆಳಗಾವಿ • ಶಿವಮೊಗ್ಗ
• ಹುಬ್ಬಳ್ಳಿ • ಮಂಗಳೂರು • ಕಲಬುರಗಿ
51 ವರ್ಷ • ಸಂಚಿಕೆ 136 • ಪುಟ 12+4 • ಬೆಲೆ ₹5
epaper.kannadaprabha.in

ಮೌಢ್ಯ ಮಸೂದೆ ಮುಂದಿನ ಅಧಿವೇಶನದಲ್ಲಿ ಮಂಡನೆ ↘6

9500 ಅಂಕ ತಲುಪಿ
ದಾಖಲೆ. ಸೆನ್ಸೆಕ್ಸ್ 30

ಕನ್ನಡಪ್ರಭ
ನೇರ. ದಿಟ್ಟ. ನಿರಂತರ



ಕಾಂಗ್ರೆಸ್
ಬ್ರಿಗೇಡ್‌ಗೆ
ಫೇಸ್ಬುಕ್, ಟ್ವೀಟರ್ ಅ
ಹೊಸ ಹೊಣೆ. ಜ್ಯೋತಿ
ಪೈಲಟ್, ಆರ್.ಪಿ.ಎನ್
ಜತೆಗೂಡಿ ಪಕ್ಷದ ಕೆಲಸ.
ವೈಫಲ್ಯ, ಕಾಂಗ್ರೆಸ್ ಸಾ

CENTRAL LIBRARY

### ಮುದ್ರಾ, ಯೋಜನೆಯಲ್ಲಿ ಸಾಲ ನೀಡುವುದು ಕಡ್ಡಾಯ, ಸಾಲ ಮರುಪಾವತಿಯಾಗದಿದ್ದರೆ ಕೇಂದ್ರ, ಸರ್ಕಾರ ಗ್ಯಾರಂಟಿ

# 18ರಂದು ಅಡ್ಯಾರಿನಲ್ಲಿ ಕೇಂದ್ರ ಯೋಜನೆಗಳ ಕಾರ್ಯಾಗಾರ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಕೇಂದ್ರ, ಸರ್ಕಾರದ ನೂತನ ಯೋಜನೆಗಳಾದ ಪ್ರಧಾನ ಮಂತ್ರಿ, ಮುದ್ರಾ, ಯೋಜನೆ ಹಾಗೂ ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಕುರಿತ ಮಾಹಿತಿ ಶಿಬಿರ ಮತ್ತು ಫಲಾನುಭವಿಗಳ ಕಾರ್ಯಾಗಾರ ಮೇ 18ರಂದು ಅಡ್ಯಾರಿನ ಸಹ್ಯಾದ್ರಿ, ಕಾಲೇಜಿನಲ್ಲಿ ನಡೆಯಲಿದೆ.

ಬೆಳಗ್ಗೆ 11 ಗಂಟೆಗೆ ಕೇಂದ್ರ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಉದ್ಘಾಟಿಸಲಿದ್ದು, ಕೇಂದ್ರ, ಸಹಾಯಕ ವಿತ್ತ ಸಚಿವ ಅರ್ಜುನ್ ರಾಮ್ ಮೇಘಾವಾಲ್ ಯೋಜನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಗಣೇಶ್ ಕಾರ್ಣಿಕ್, ಸುಳ್ಯ ಶಾಸಕ ಅಂಗಾರ, ಜಿ.ಪಂ. ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು, ಸಿಂಡಿಕೇಟ್ ಬ್ಯಾಂಕ್ ಎಂಡಿ ಅರುಣ್ ಶ್ರೀವಾಸ್ತವ, ಕಾರ್ಪೊರೇಷನ್ ಬ್ಯಾಂಕ್ ಎಂಡಿ ಜೈಕುಮಾರ್ ಗರ್ಗ್, ಕರ್ಣಾಟಕ ಬ್ಯಾಂಕ್ ಎಂಡಿ ಮಹಾಬಲೇಶ್ವರ, ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ರಾಜೇಂದ್ರ, ಕುಮಾರ್ ಭಾಗವಹಿಸುವರು ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಕಾರ್ಯಾಗಾರದಲ್ಲಿ ಸುಮಾರು 2,000 ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಅಲ್ಲದೆ ಪ್ರಧಾನ ಮಂತ್ರಿ, ಮುದ್ರಾ, ಯೋಜನೆಯಡಿ 2015 ಏಪ್ರಿಲ್‌ನಿಂದ 2017 ಮಾರ್ಚ್‌ವರೆಗೆ 50,706 ಮಂದಿ ಫಲಾನುಭವಿಗಳು ₹ 702.71 ಕೋಟಿ ಸಾಲ ಪಡೆದಿದ್ದಾರೆ. ಈ ಫಲಾನುಭವಿಗಳನ್ನೂ ಸಮಾವೇಶಕ್ಕೆ ಆಹ್ವಾನಿಸಲಾಗಿದೆ ಎಂದರು.

ಮುದ್ರಾ, ಯೋಜನೆಯಲ್ಲಿ ₹ 50 ಸಾವಿರದಿಂದ ₹ 10 ಲಕ್ಷವರೆಗೆ ಜಾಮೀನು ರಹಿತವಾಗಿ ಬ್ಯಾಂಕ್‌ಗಳು ಫಲಾನುಭವಿಗಳಿಗೆ ಸಾಲವನ್ನು ನೀಡಬೇಕು. ಸಾಲ ಮರುಪಾವತಿಯಾಗದಿದ್ದರೆ ಬ್ಯಾಂಕ್‌ಗಳಿಗೆ ನಷ್ಟವಿಲ್ಲ. ಯಾಕೆಂದರೆ ಸಾಲದ ಮೊತ್ತವನ್ನು ಕೇಂದ್ರ, ಸರ್ಕಾರ ಭರಿಸುತ್ತದೆ. ಬ್ಯಾಂಕ್‌ಗಳು ಯಾವುದೇ ನೆಪ ಹೇಳಿ ಸಾಲ ನಿರಾಕರಿಸುವಂತಿಲ್ಲ. ಈ ಯೋಜನೆಯಲ್ಲಿ ಸಾಲ ಪಡೆಯಲು ಸಬ್ಸಿಡಿ ಇರುವುದಿಲ್ಲ. ಆದರೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಇರುತ್ತದೆ ಎಂದರು.

**ಪ್ರಧಾನಿ ಯೋಜನೆಗಳ ಸಾಧನೆ:** ಪ್ರಧಾನ ಮಂತ್ರಿ ಜನಧನ್ ಯೋಜನೆಯಲ್ಲಿ ಒಟ್ಟು 3,68,562 ಖಾತೆಗಳನ್ನು ತೆರೆಯಲಾಗಿದೆ. ಇದರಲ್ಲಿ 2,77,401 ಮಂದಿಗೆ ರುಪೇ ಕಾರ್ಡ್ ನೀಡಲಾಗಿದೆ. 2,25,980 ಖಾತೆಗಳು ಸಕ್ರಿಯವಾಗಿದೆ. ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾದಲ್ಲಿ 80 ಪ್ರಸ್ತಾವನೆಗಳು ಮಂಜೂರಾಗಿದ್ದು, ₹ 15.54 ಕೋಟಿ ಸಾಲ ನೀಡಲಾಗಿದೆ. ಜೀವನ ಜ್ಯೋತಿ ಬಿಮಾ ಯೋಜನೆಯಲ್ಲಿ 1,23,506 ಖಾತೆಗಳನ್ನು ತೆರೆಯಲಾಗಿದ್ದು, 218 ಕ್ಲೇಮ್‌ಗಳಿಗೆ ₹ 436 ಲಕ್ಷ ನೀಡಲಾಗಿದೆ. ಸುರಕ್ಷಾ ಬಿಮಾ ಯೋಜನೆಯಲ್ಲಿ 3,46,220 ಖಾತೆಗಳಲ್ಲಿ ₹ 220 ಲಕ್ಷ ಮೊತ್ತವನ್ನು 111 ಕ್ಲೇಮ್‌ಗಳಿಗೆ ನೀಡಲಾಗಿದೆ. ಅಟಲ್ ಪಿಂಚಣಿಯಲ್ಲಿ 11,496 ಖಾತೆಗಳನ್ನು ತೆರೆಯಲಾಗಿದೆ. ಉದ್ಯೋಗ ಸೃಷ್ಟಿ ಯೋಜನೆಯಲ್ಲಿ 2015-16ನೇ ಸಾಲಿಗೆ 228 ಫಲಾನುಭವಿಗಳಿಗೆ ₹ 895.50 ಲಕ್ಷ ಸಾಲ ನೀಡಲಾಗಿದೆ ಎಂದರು.

ಜಿಲ್ಲಾ ಲೀಡ್ ಬ್ಯಾಂಕ್ ಮೆನೇಜರ್ ರಾಘವ ಯಜಮಾನ್ಯ, ಕೌಶಲ್ಯಾಭಿವೃದ್ಧಿ ಯೋಜನೆ ಮೇಲ್ವಿಚಾರಕ ಲೋಕೇಶ್, ಜಿಲ್ಲಾ ಮೆನೇಜರ್ ವೀರಪ್ಪ ಪೂಜಾರಿ ಇದ್ದರು.

ಶಿವಮೊಗ್ಗಕ್ಕೂ ಸೈಬರ್ ದಾಳಿ: ಉಪನ್ಯಾಸಕನಿಗೆ 600 ಡಾಲರ್‌ಗೆ ಬೇಡಿಕೆ ▸4



ಜಾಧವ್ ಪರ ವಾದಕ್ಕೆ ಹರೀಶ್ ಸಾಳ್ವೆ ಪಡೆದಿದ್ದು ಕೇವಲ 1 ರೂ. ವೇತನ ▸9



ರಾಜ್ಯದ 5 ಜಿಲ್ಲೆಗಳಲ್ಲಿ ಇಎಸ್‌ಐ ಆಸ್ಪತ್ರೆ: ಕೇಂದ್ರ ಕಾರ್ಮಿಕ ಸಚಿವ ▸5

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

website www.hosadigantha.com diganthamlr@gmail.com @diganthaonline

REG.No.MNG / 121 / 2015-17 Posted at kodialbail P.O / RNI:29813/78/ Daily


## ಕೇಂದ್ರ ಯೋಜನೆಗಳ ಫಲಾಪೇಕ್ಷಿತರಿಗಾಗಿ ಸಹ್ಯಾದ್ರಿಯಲ್ಲಿ ನಾಳೆ ಕಾರ್ಯಕ್ರಮ

# ಸ್ಟಾರ್ಟ್ ಅಪ್ ಸ್ಟ್ಯಾಂಡ್ ಅಪ್: ಕಾರ್ಯಾಗಾರ

▸ ದಿಗಂತ ವರದಿ : ಮಂಗಳೂರು, ಮೇ 16

ಭಾರತ ಸರಕಾರದ ವಿನೂತನ ಯೋಜನೆಗಳಾದ ಪ್ರಧಾನಮಂತ್ರಿ ಮುದ್ರಾ ಯೋಜನೆ, ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಕುರಿತ ಮಾಹಿತಿ ಶಿಬಿರ ಹಾಗೂ ಕೇಂದ್ರದ ವಿವಿಧ ಯೋಜನೆಗಳ ಫಲಾನುಭವಿಗಳು, ಫಲಾಪೇಕ್ಷಿತರ ಒಂದು ದಿನದ ಕಾರ್ಯಾಗಾರ ನಾಳೆ ಅಡ್ಯಾರಿನ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ನಡೆಯಲಿದೆ.



ಸಂಸತ್ ಸದಸ್ಯ ನಳಿನ್‌ಕುಮಾರ್ ಕಟೀಲು ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದು ಜಿಲ್ಲಾ ಮಟ್ಟದ ಫಲಾನುಭವಿಗಳು ಮತ್ತು ಫಲಾಪೇಕ್ಷಿತರ ಕಾರ್ಯಾಗಾರವಾಗಿರುತ್ತದೆ. ಈಗಾಗಲೇ ಕೇಂದ್ರ ಸರಕಾರದ ಯೋಜನೆಗಳ ಸೌಲಭ್ಯ ಪಡೆದವರು ಮತ್ತು ಸೌಲಭ್ಯ ಪಡೆಯಲಿಚ್ಛಿಸುವವರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳ ಬೇಕು ಎಂದು ವಿನಂತಿಸಿದರು.

ಕೇಂದ್ರ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ ಜಾವಡೇಕರ್ ಕಾರ್ಯಾಗಾರವನ್ನು ಉದ್ಘಾಟಿಸುವರು. ಕೇಂದ್ರ ಸಹಾಯಕ ವಿತ್ತ ಸಚಿವ ಅರ್ಜುನರಾಮ್ ಮೇಘವಾಲ್ ಫಲಾನುಭವಿಗಳಿಗೆ ಯೋಜನೆಗಳ ಸವಲತ್ತುಗಳನ್ನು ಹಸ್ತಾಂತರಿಸುವರು. ವಿಧಾನ ಪರಿಷತ್ತು ಪ್ರತಿಪಕ್ಷದ ಮುಖ್ಯ ಸಚೇತಕ ಕ್ಯಾ.ಗಣೇಶ ಕಾರ್ಣಿಕ್, ಶಾಸಕ ಎಸ್.ಅಂಗಾರ, ದಕ ಜಿಪಂ ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು ಹಾಗೂ ಪ್ರಮುಖ ಬ್ಯಾಂಕುಗಳ ಅಧ್ಯಕ್ಷರು, ಆಡಳಿತ ನಿರ್ದೇಶಕರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಸುಮಾರು 2,000 ಜನರು ಭಾಗವಹಿಸುವ ನಿರೀಕ್ಷೆ ಇದೆ. ಸ್ಥಳದಲ್ಲಿ ಬ್ಯಾಂಕುಗಳು ಕೌಂಟರ್‌ಗಳನ್ನು ತೆರೆಯಲಿದ್ದು, ಪ್ರಧಾನ ಮಂತ್ರಿ ಮುದ್ರಾ ಹಾಗೂ ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಯೋಜನೆಗಳ ಅಡಿಯಲ್ಲಿ ಸಾಲ ಸೌಲಭ್ಯ ಪಡೆಯ ಬಯಸುವವರು ಕೌಂಟರ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಇಂತಹ ಯೋಜನೆಗಳ ಕುರಿತು ಕಾರ್ಯಾಗಾರದಲ್ಲಿ ಮಾಹಿತಿ ನೀಡಲಾಗುವುದು ಎಂದರು.

ನರೇಂದ್ರ ಮೋದಿಯವರ ಜನಧನ್ ಯೋಜನೆ ಮತ್ತು ಪ್ರಧಾನ ಮಂತ್ರಿ ಮುದ್ರಾ ಯೋಜನೆಯ ಅನುಷ್ಠಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ದೇಶದಲ್ಲಿಯೇ ಮೊದಲ ಸ್ಥಾನದಲಿದೆ ಎಂದು ನಳಿನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಮೆನೇಜರ್ ರಾಘವ ಯಜಮಾನ್ಯ, ದ.ಕ ಜಿಪಂ ಯೋಜನಾ ನಿರ್ದೇಶಕ ಟಿ.ಎಸ್. ಲೋಕೇಶ ಮತ್ತು ಖಾದಿ ಗ್ರಾಮೋದ್ಯೋಗ ಜಿಲ್ಲಾ ವ್ಯವಸ್ಥಾಪಕ ವೀರಪ್ಪ ಪೂಜಾರಿ ಉಪಸ್ಥಿತರಿದ್ದರು.

### ಹ್ಯಾಟ್ಸ್ ಅಪ್ ದಕ್ಷಿಣ ಕನಡ

ಮುದ್ರಾ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 50,706 ಮಂದಿ ರೂ.702.71 ಕೋಟಿ ಸಾಲ ಸೌಲಭ್ಯವನ್ನು ಈ ತನಕ ಪಡೆದಿದ್ದಾರೆ. ಮುದ್ರಾ ಶಿಶು ಫಲಾನುಭವಿಗಳು 28,365 ಸಾಲ ಸೌಲಭ್ಯ ರೂ.93.73 ಕೋಟಿ. ಮುದ್ರಾ ಕಿಶೋರ್ ಫಲಾನುಭವಿಗಳು 19,370. ಪಡೆದ ಸಾಲ ಸೌಲಭ್ಯ ರೂ.402.97 ಕೋಟಿ. ಮುದ್ರಾ ತರುಣ್ ಫಲಾನುಭವಿಗಳು 2,971. ಪಡೆದ ಸಾಲ ಸೌಲಭ್ಯ ರೂ.206.01 ಕೋಟಿ.

**ಜನಧನ್** : ಜನಧನ್ ಯೋಜನೆಯಡಿ ಜಿಲ್ಲೆಯಲ್ಲಿ 3,68,562 ಖಾತೆಗಳನ್ನು ತೆರೆಯಲಾಗಿದೆ. ಇವುಗಳ ಪೈಕಿ 2,77,401 ಖಾತೆದಾರರಿಗೆ ರೂಪೆ ಕಾರ್ಡ್‌ಗಳನ್ನು ವಿತರಿಸಲಾಗಿದೆ. 2,25,980 ಖಾತೆಗಳು ಸಕ್ರಿಯವಾಗಿವೆ.

ಮೂರು ತಿಂಗಳ ಹಿಂದೆ ಜಾರಿಯಾದ ಸ್ಟಾರ್ಟ್ ಅಪ್ ಮತ್ತು ಸ್ಟ್ಯಾಂಡ್ ಅಪ್ ಯೋಜನೆಯಲ್ಲಿ 80 ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ. ರೂ.15.54 ಕೋಟಿ ಸಾಲ ಸೌಲಭ್ಯ ಒದಗಿಸಲಾಗಿದೆ.